1448 (1675) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಪಾಲಿಕೆಯ ವ್ಯಾಪ್ತಿಯಲ್ಲಿ 9 ಸರ್ಕಲ್, ಫುಟ್‌ಪಾತ್, ರಿಂಗ್‌ರಸ್ತೆಗಳ ಅಭಿವೃದ್ಧಿಗೆ 12 00 ಕೋಟಿ ವಿಶೇಷ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ,

ಆ) 12 00 ಕೋಟಿ ರೂ ವಿಶೇಷ ಅನುದಾನ ಕೋರಿ ಸಲ್ಲಿಸಿದ ಪ್ರಸ್ತಾವನೆ ಮಂಜೂರು ಮಾಡಿ ಹಣ ಬಿಡುಗಡೆ ಮಾಡಲಾಗಿದೆಯೇ, ಹಾಗಿಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಹಣ ಬಿಡುಗಡೆಯನ್ನು ನಿರೀಕ್ಷಿಸಲಾಗಿದೆ

1449 (1676) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಅಭಿವೃದ್ಧಿಗೆ ಒತ್ತು ನೀಡಲು ಸರ್ಕಾರ ಯಾವ ಯಾವ ಯೋಜನೆ ಹಮ್ಮಿಕೊಂಡಿದೆ,

ಆ) ಯೋಜನೆಗಳ ವಿವರ ಹಾಗೂ ತಗಲುವ ಅಂದಾಜು ವೆಚ್ಚ ಎಷ್ಟು,

ಇ) ಮಹಾನಗರದ ಅಭಿವೃದ್ಧಿಗೆ ಪೂರಕವಾದಂತಹ ವಿಶೇಷ ಆರ್ಥಿಕ ವಲಯ ಎಂದು ಸರ್ಕಾರ ಘೋಷಿಸಿದೆಯೇ,

ಈ) ಹಾಗಿಲ್ಲವಾದಲ್ಲಿ ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ

1) ಉತ್ತರ ಕರ್ನಾಟಕ ನಗರ ಹೂಡಿಕಾ ಕಾರ್ಯಕ್ರಮ ಯೋಜನೆ **(NKUSIP)**

2) ಕರ್ನಾಟಕ ನೀರು ಸರಬರಾಜು ಕ್ಷೇತ್ರ ಅಭಿವೃದ್ಧಿ ಯೋಜನೆ **(KUWASIP)**

3) ಸಣ್ಣ ಮತ್ತು ಮಧ್ಯಮ ವರ್ಗದ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ **(CSS)**

ಆ) 1) ಉತ್ತರ ಕರ್ನಾಟಕ ನಗರ ಹೂಡಿಕಾ ಕಾರ್ಯಕ್ರಮ ಯೋಜನೆ ಅಡಿಯಲ್ಲಿ **(NKUSIP)** ರೂ 165 75 ಲಕ್ಷಗಳು

2) ಕರ್ನಾಟಕ ನೀರು ಸರಬರಾಜು ಕ್ಷೇತ್ರ ಅಭಿವೃದ್ಧಿ ಯೋಜನೆಗೆ **(KUWASIP)** ರೂ 47 14 ಲಕ್ಷಗಳು

3) ಕೇಂದ್ರ ಪುರಸ್ಕೃತ ಯೋಜನೆಯಡಿ ಸಣ್ಣ ಮತ್ತು ಮಧ್ಯಮ ವರ್ಗದ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗೆ **(CSS)** ರೂ 561 68 ಲಕ್ಷಗಳು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

1449 (1677) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧ ಯಾವ ಯಾವ ಶಹರಗಳಲ್ಲಿ ಜಾರಿಯಲ್ಲಿರುತ್ತದೆ, (ನಗರವಾರು ವಿವರ ನೀಡುವುದು)